SERVICE ABOVE SELF



Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

Rotary THE MAGIC OF ROTARY 2024-25

Rtn. Stephanie A. Urchick
RI President 2024-25

| Rtn. CA Dev Anand<br>District Governor 2024-25 | Rtn. K. Sooryanarayana Udpa<br>President, Mob: 99009 66114 | Rtn. N.G. Usha<br>Secretary, Mob : 81975 92278 | Rtn. M. Madhavachar<br>Bulletin Editor, Mob: 98862 73495 |
|---|---|---|---|

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 67 ಸಂಚಿಕೆ –03 ದಿನಾಂಕ : 24–07–2024


## ದಿನಾಂಕ: 24.07.2024 ರ ವಾರದ ಸಭೆಯ ವರದಿ

**ದಿನಾಂಕ: 24.07.2024 ಈ ಸಾಲಿನ ಮೂರನೇ ಸಭೆ ವಿಶಿಷ್ಟವಾದ ಸಭೆಯಾಗಿತ್ತು. ಅಂದು ನಮ್ಮ ಕ್ಲಬ್‌ನ ವೈದ್ಯರುಗಳ ಜೊತೆಗೆ ಇತ್ತೀಚೆಗೆ ವೈದ್ಯ ಭೂಷಣ ಪ್ರಶಸ್ತಿ ಪಡೆದ ರೊ.ಡಾ. ಗುಡದಪ್ಪ ಕಸಬಿ ಅವರಿಗೆ ಸನ್ಮಾನ ಕಾರ್ಯಕ್ರಮ ಏರ್ಪಾಡಾಗಿತ್ತು. ಮುಖ್ಯ ಅತಿಥಿಗಳಾಗಿ ಸರ್ಜಿ ಆಸ್ಪತ್ರೆಯಲ್ಲಿ ಫಿಜಿಶಿಯನ್ ಆಗಿ ಕಾರ್ಯ ನಿರ್ವಹಿಸುತ್ತಿರುವ ಡಾ. ಶೂನ್ಯ ಸಂಪದ್‌ರವರು ಆಗಮಿಸಿದ್ದರು. ಅವರೊಂದಿಗೆ ಅಧ್ಯಕ್ಷರಾದ ರೊ.ಕೆ.ಸೂರ್ಯನಾರಾಯಣ ಉಡುಪರು ಮತ್ತು ಕಾರ್ಯದರ್ಶಿ ರೊ.ಎನ್. ಜಿ. ಉಷಾರವರು ವೇದಿಕೆಯಲ್ಲಿದ್ದರು.**

ರೊ. ಡಾ. ರಕ್ಷಾ ಯು. ರಾವ್‌ರವರಿಂದ "ಶರಣು ಗಜಮುಖ" ಎಂಬ ಗೀತೆಯ ಸುಶ್ರಾವ್ಯ ಗಾಯನದ ಪ್ರಾರ್ಥನೆ ಮೂಲಕ ಸಭೆ ಪ್ರಾರಂಭವಾಯಿತು. ರೊ. ಜಗದೀಶ್ ಕಾಮತ್‌ರವರು ಸರ್ವರನ್ನು ಸ್ವಾಗತಿಸಿದರು. ಇತ್ತೀಚೆಗೆ ನಿಧನರಾದ ರೊ.ಪಿಡಿಜಿ ಎಂ.ಜಿ.ರಾಮಚಂದ್ರಮೂರ್ತಿ ಯವರ ನಿಧನಕ್ಕೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಮಾಜಿ ಸಹಾಯಕ ಗವರ್ನರ್ ರೊ.ಎಸ್. ದತ್ತಾತ್ರಿಯವರು ರೊ.ಪಿಡಿಜಿ ಎಂ.ಜಿ.ರಾಮಚಂದ್ರ ಮೂರ್ತಿಯವರ ಬಗ್ಗೆ ಮಾತನಾಡಿ, ಕರ್ತೃತ್ವ ಶಕ್ತಿ, ಸಮಾಧಾನದ ನಾಯಕ ಎಂಬುದಕ್ಕೆ ಅನ್ವರ್ಥ ಶ್ರೀ.ಎಂ.ಜಿ. ರಾಮಚಂದ್ರಮೂರ್ತಿಯವರು. 2021–22 ನೇ ಸಾಲಿನಲ್ಲಿ ರೋಟರಿ ಜಿಲ್ಲೆ 3182 ಗವರ್ನರ್ ಆಗಿದ್ದು, ಅಂದು ಕೋವಿಡ್ ತನ್ನ ಅಟ್ಟಹಾಸವನ್ನು ಮೆರೆದಿತ್ತು. ಆ ಸಂದರ್ಭದಲ್ಲಿ ರೋಟರಿ ಸಮ್ಮೇಳನ ನಡೆಸುವ ಬಗ್ಗೆ ಸಮಚಿತ್ತದಿಂದ ಕಾರ್ಯಗಳನ್ನು ನಿಭಾಯಿಸಿದ್ದು ಅವರ ಕಾರ್ಯಕ್ಷಮತೆಗೆ ಸಾಕ್ಷಿ ಎಂದರು. ರೋಟರಿ ಸೆಂಟಿನರಿ ಫೌಂಡೇಷನ್ ಲೆಕ್ಕಪತ್ರಗಳನ್ನು ಸಮರ್ಪಕವಾಗಿ ನಿರ್ವಹಿಸಿ, ಸಮಯೋಚಿತ ಸಲಹೆಗಳನ್ನು ನೀಡುತ್ತಿದ್ದರು. ರೋಟರಿಯ ಸೇವಾ ಗುಣ ಹೊಂದಿದ ಅವರಲ್ಲಿ ಸರಳತೆ ಸಹಿಷ್ಣುತೆ ಸಮಾಧಾನವಿತ್ತು. ಅವರ ಅಗಲಿಯ ನೋವನ್ನು ಭರಿಸುವ ಶಕ್ತಿ ರೋಟರಿಗೆ ಮತ್ತು ಅವರ ಕುಟುಂಬದವರಿಗೆ ದೊರಕಲಿ. ನಂತರ ಮೃತರ ಗೌರವಾರ್ಥ ಒಂದು ನಿಮಿಷದ ಮೌನವಾಚರಿಸಲಾಯಿತು.

ರೊ. ವೈ.ಗೋಪಾಲಕೃಷ್ಣ ಗುಪ್ತರವರು ರೋಟರಿ ಮಾಹಿತಿ ನೀಡಿದರು. ರೊ. ಡಾ. ಹೆಚ್.ಪಿ.ಸಿ. ಶಿವಕುಮಾರ್‌ರವರು ರೋಟರಿ ಫೌಂಡೇಷನ್‌ಗೆ ರೂ. 50,000/– ಚೆಕ್‌ನ್ನು ರೋಟರಿ ಸೆಂಟಿನರಿ ಫೌಂಡೇಷನ್‌ನ ಚೇರ್ಮನ್ ರೊ.ಎನ್.ಎಸ್. ಶ್ರೀಧರ್‌ರವರಿಗೆ ಹಸ್ತಾಂತರಿಸಿದರು. ಚೆಕ್ ಸ್ವೀಕರಿಸಿ







ಮಾತನಾಡಿದ ಮಾಜಿ ಸಹಾಯಕ ಗವರ್ನರ್ ರೊ.ಎನ್. ಎಸ್. ಶ್ರೀಧರ್‌ರವರು ಡಾ. ಹೆಚ್. ಪಿ.ಸಿ.ಶಿವಕುಮಾರ್‌ರವರಿಗೆ ಕೃತಜ್ಞತೆ ವ್ಯಕ್ತಪಡಿಸಿದರು. ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ಪ್ರಕಟಣೆಗಳನ್ನು ನೀಡಿದರು. ರೊ.ಡಾ. ಹೆಚ್.ಪಿ.ಸಿ. ಶಿವಕುಮಾರ್‌ರವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಲಾಗಿ ವೇದಿಕೆಗೆ ಆಗಮಿಸಿ, ಶುಭಾಶಯಗಳನ್ನು ಸ್ವೀಕರಿಸಿದರು. ರೊ.ಎಸ್.ಜಿ. ಗೋಪಾಲ್‌ರವರು ಸದಸ್ಯತ್ವ ಶುಲ್ಕ ನೀಡಲು ಮನವಿ ಮಾಡಿದರಲ್ಲದೇ ಜೋಕ್ ಒಂದನ್ನು ಪ್ರಸ್ತುತ ಪಡಿಸಿದರು. ರೊ. ಎನ್.ವಿ. ಭಟ್‌ರವರು ಮಾತನಾಡಿ ಮುಂದಿನ ವಾರ ಪರಿಸರ ಗೀತೆಗಳ ಗಾಯನ ಹಾಗೂ ಪರಿಸರದ ಬಗ್ಗೆ ಕೈಗೊಂಡ ಕಾರ್ಯಕ್ರಮಗಳ ಬಗ್ಗೆ ವಿವರಿಸಬಹುದು ಎಂದರು. ರೊ. ಡಾ. ಗಿರೀಶ್‌ಕುಮಾರ್‌ರವರು ಅಂದಿನ ಮುಖ್ಯ ಅತಿಥಿಗಳಾದ ಡಾ.ಶೂನ್ಯ ಸಂಪದ್‌ರವರನ್ನು ಸಭೆಗೆ ಪರಿಚಯಿಸಿದರು.

ಮುಖ್ಯ ಅತಿಥಿಗಳಾದ ಡಾ.ಶೂನ್ಯ ಸಂಪದ್‌ರವರು ತಮ್ಮನ್ನು ಈ ರೋಟರಿಗೆ ಮುಖ್ಯ ಅತಿಥಿಗಳಾಗಿ ಆಗಮಿಸಲು ಆಹ್ವಾನಿಸಿದ್ದಕ್ಕೆ ತಮ್ಮ ಕೃತಜ್ಞತೆಯನ್ನು ಹೇಳುತ್ತಾ ಮನುಷ್ಯನ ಥೈರಾಯ್ಡ್ ಸಮಸ್ಯೆಯ ಬಗ್ಗೆ ಮಾತನಾಡಿದರು. ಇದು ಹರಡದೇ ಇರುವ ಕಾಯಿಲೆಯಾಗಿರುತ್ತದೆ. ನಮ್ಮ ದೇಹದಲ್ಲಿ ಸುಮಾರು ಗ್ರಂಥಿಗಳಿವೆ. ಅವುಗಳಲ್ಲಿ ಒಂದು ಥೈರಾಯ್ಡ್ ಆಗಿದ್ದು, ಇದು ಥೈರಾಕ್ಸಿನ್ ಎಂಬ ಹಾರ್ಮೋನನ್ನು ಉತ್ಪತ್ತಿ ಮಾಡುತ್ತದೆ. ಇದು ಗಂಟಲಿನ ಭಾಗದಲ್ಲಿದ್ದು ಇದನ್ನು ಪಿಟ್ಯುಟರಿ ಗ್ರಂಥಿಯು ನಿಯಂತ್ರಿಸುತ್ತಿರುತ್ತದೆ. ಥೈರಾಯ್ಡ್


2ನೇ ಪುಟಕ್ಕೆ


## ಈ ವಾರದ ಸಭೆ

**ದಿನಾಂಕ : 31-07-2024 ಬುಧವಾರ** **ಸಂಜೆ 7:15**

### ಕೌಟುಂಬಿಕ ಸ್ನೇಹ ಮಿಲನ ಸಭೆ

### FAMILY MEET

**Theme: ಹಸಿರೇ–ಉಸಿರು**

**ಪರಿಸರ ಗೀತ ಗಾಯನ, ಪರಿಸರ ಕ್ವಿಜ್**

**ಪರಿಸರಕಾಳಜಿ ಯೋಜನೆಗಳು**

**ದಯಮಾಡಿ ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ.**

ಸ್ಥಳ: **ರೋಟರಿ ಯುವ ಕೇಂದ್ರ**, ಸವಳಂಗ ರಸ್ತೆ, ಶಿವಮೊಗ್ಗ

ಗ್ರಂಥಿಯು ಎಷ್ಟು ಪ್ರಮಾಣದಲ್ಲಿ ಹಾರ್ಮೋನನ್ನು ಉತ್ಪತ್ತಿ ಮಾಡಬೇಕು ಬಿಡುಗಡೆ ಮಾಡಬೇಕು ಎಂಬುದನ್ನು ಪಿಟ್ಯೂಟರಿ ಗ್ರಂಥಿ ನಿರ್ದೇಶನ ಮಾಡುತ್ತದೆ.

ಇದರಲ್ಲಿ ಹೈಪರ್ ಥೈರಾಯ್ಡ್ ಮತ್ತು ಹೈಪೋ ಥೈರಾಯ್ಡ್ ಎರಡು ವಿಭಾಗಗಳಿವೆ. ಹೈಪರ್ ಹಾರ್ಮೋನು ಹೆಚ್ಚಾಗಿ ಸ್ರವಿಸುವುದರಿಂದ ಕೆಲವೊಮ್ಮೆ ಅವಶ್ಯಕತೆಗಿಂತ ಜಾಸ್ತಿಯಾಗಿ ಹಾರ್ಮೋನು ಬಿಡುಗಡೆಯಾದರೆ ಸಮಸ್ಯೆ ಕಾಣಿಸಿಕೊಳ್ಳುತ್ತದೆ. ಹೆಣ್ಣು ಮಕ್ಕಳಲ್ಲಿ ಹೆಚ್ಚಾಗಿ ಥೈರಾಯ್ಡ್ ಸಮಸ್ಯೆ ಕಾಣಿಸುತ್ತಿದ್ದು, ಇದರ ಪರಿಣಾಮ ನಮ್ಮಲ್ಲಿ ಚಂಚಲತೆ, ದೇಹಾಲಸ್ಯ, ಡಯಾರಿಯಾ, ತೂಕ ಕಡಿಮೆಯಾಗುವುದು, ತುಂಬಾ ಚಳಿಯಾಗುವುದು ಕಂಡು ಬರುತ್ತದೆ. ನಮ್ಮ ದೇಹಕ್ಕೆ ಯಾವ ಆಹಾರಗಳು ಸಲ್ಲಬೇಕು ಎಂಬುದನ್ನು ಈ ಗ್ರಂಥಿಯು ನಿರ್ಧರಿಸುತ್ತದೆ. ಹೈಪೋ ಥೈರಾಯ್ಡ್ ಹಾರ್ಮೋನು ಹೆಚ್ಚಾಗಿ ಸ್ರವಿಸುವುದರಿಂದ, ಮಾನಸಿಕ ಅಸಮತೋಲನ, ಶಕ್ತಿಯ ಉಡುಗುವಿಕೆ, ಬೆವರುವುದು ಮುಂತಾದವುಗಳ ಸಮಸ್ಯೆಯಾಗಬಹುದು. ಆದರೆ ಇದರ ಸ್ರವಿಸುವಿಕೆ ಕಡಿಮೆಯಾದರೆ, ದೈಹಿಕ ಶಕ್ತಿ ಕಡಿಮೆಯಾಗುತ್ತದೆ. ಚಟುವಟಿಕೆಯಿಂದಿದ್ದವರು ನಿಶ್ಯಕ್ತಿಗೊಳಗಾಗುತ್ತಾರೆ. ಇಂಥವರಿಗೆ ಥೈರಾಯ್ಡನ್ನು ಹೊರಗಡೆಯಿಂದ ಕೊಡಬೇಕಾಗುತ್ತದೆ. ಇದರಲ್ಲಿ ಹೆಚ್ಚಿನ ಪರಿಣಾಮವೆಂದರೆ ಗಂಟಲಿನಲ್ಲಿ ಕ್ಯಾನ್ಸರ್ ಗೆಡ್ಡೆಗಳಾಗುವ ಸಂಭವವಿರುತ್ತದೆ. ಆದರೆ ಇಲ್ಲಿ ಹೆಚ್ಚಿನದಾಗಿ ಕ್ಯಾನ್ಸರ್‌ನ ಸಂಭಾವ್ಯತೆ ಕಡಿಮೆ ಇರುತ್ತದೆ ಎಂದರು. ಥೈರಾಯ್ಡ್ ಸಮಸ್ಯೆಗೆ ನಿಯಮಿತವಾದ ಮಾತ್ರೆಗಳ ಸೇವನೆ. ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ತೆಗೆದುಕೊಳ್ಳಬೇಕು. ಈ ಕಾಯಿಲೆ ನಿಧಾನವಾಗಿ ಹಾಗೂ ತ್ವರಿತವಾಗಿ ಉಲ್ಬಣವಾಗುವಂತಹದ್ದಿರುತ್ತದೆ ಎಂದು ತಿಳಿಸಿ ಅದರ ಚಿಕಿತ್ಸೆಗಳ ಬಗ್ಗೆ ವಿವರಿಸಿದರು.

ರೊ. ಸಿ.ಬಿ.ವೀರಣ್ಣನವರು ಮಂಗನ ಕಾಯಿಲೆಬಗ್ಗೆ ಕೇಳಿದರು. ಅದಕ್ಕುತ್ತರಿಸಿದ ಡಾ. ಶೂನ್ಯ ಸಂಪದ್‌ರವರು ಮಂಗನ ಕಾಯಿಲೆ ವೈರಸ್‌ನಿಂದ ಬರುವಂತಹದ್ದಾಗಿದ್ದು, ಈ ಕಾಯಿಲೆಗೆ ಸಂಬಂದವಿಲ್ಲವೆಂದು ತಿಳಿಸಿದರು. ರೊ. ಎನ್.ವಿ. ಭಟ್‌ರವರು ಗಾಯಿಟರ್ ಕಾಯಿಲೆ ಬಗ್ಗೆ ಕೇಳಿದರು.ಅದು ನಿಧಾನವಾಗಿ ಕರಗುತ್ತದೆ ಎಂದರು. ರೊ. ಪೇಟೆ ಅಜಯಕುಮಾರ್‌ರವರು ನಾರ್ಮಲ್ ರೇಂಜ್‌ನಲ್ಲಿದ್ದರೆ ಚಿಕಿತ್ಸೆ ಬೇಕಾ ಎಂದು ಪ್ರಶ್ನಿಸಿದ್ದಕ್ಕೆ ಅಂತಹ ಸಂದರ್ಭದಲ್ಲಿ ಚಿಕಿತ್ಸೆಯ ಅಗತ್ಯವಿಲ್ಲವೆಂದು ಶೇ 10% ಕ್ಕಿಂತ ಕಡಿಮೆ ಇದ್ದಲ್ಲಿ ಚಿಕಿತ್ಸೆ ಅವಶ್ಯಕತೆ ಇಲ್ಲವೆಂದು ತಿಳಿಸಿದರು. ರೊ. ಕಿಶೋರ್ ಶೀರನಾಳಿಯವರು ಮಾತನಾಡಿ, ಹೆಣ್ಣುಮಕ್ಕಳಿಗೆ ಮದುವೆಗೆ ಮುಂಚೆ ಹಾಗೂ ನಂತರ ತೊಂದರೆ ಇದೆಯೇ ಕೇಳಿದಾಗಿ ತೊಂದರೆ ಇರುವುದಿಲ್ಲ ಎಂದರು. ಮತ್ತೊಮ್ಮೆ ಮುಖ್ಯ ಅತಿಥಿಗಳು ತಮ್ಮ ಧನ್ಯವಾದಗಳನ್ನು ತಿಳಿಸಿದರು.

**ವೈದ್ಯರುಗಳಿಗೆ ಅಭಿನಂದನೆ:** ವೈದ್ಯಭೂಷಣ ಮತ್ತು ಉತ್ತಮ ವೈದ್ಯಾಧಿಕಾರಿ ಪ್ರಶಸ್ತಿಗಳ ಗೌರವಕ್ಕೆ ಪಾತ್ರರಾದ ರೋಟರಿ ಜಿಲ್ಲೆ 3182 ರ ಜೋನ್ 11 ಮಾಜಿ ಸಹಾಯಕ ಗವರ್ನರ್ ಆದ ರೊ. ಗುಡದಪ್ಪ ಕಸಬಿಯವರನ್ನು ನಮ್ಮ ಕ್ಲಬ್‌ನ ವತಿಯಿಂದ ಆತ್ಮೀಯವಾಗಿ ಸನ್ಮಾನಿಸಲಾಯಿತು. ಅವರ ಪರಿಚಯವನ್ನು ರೊ.ಡಾ.ಕಾಂಚನ್ ಕುಲಕರ್ಣಿಯವರು ಸಭೆಯಲ್ಲಿ ಓದಿದರು. ರೊ. ಪಿಡಿಜಿ. ಡಾ.ಆರ್. ಡಿ. ಪ್ರಭು, ರೊ.ಡಾ. ರಜನಿ ಪೈ, ರೊ. ಡಾ. ಉಷಾ ಪ್ರಭು, ಮಾಜಿ ಸಹಾಯಕ ಗವರ್ನರ್ ರೊ.ಸುನೀತಾ ಶ್ರೀಧರ್, ರೊ.ಭಾರ್ಗವಿ ಭಟ್, ರೊ.ರಮಾ ಗೋಪಾಲ್‌ರವರೆಲ್ಲಾ ಸೇರಿ ರೊ.ಡಾ. ಗುಡದಪ್ಪ ಕಸಬಿಯವರನ್ನು ಸನ್ಮಾನಿಸಿದರು. ಅಧ್ಯಕ್ಷರಾದ ರೊ.ಕೆ. ಸೂರ್ಯನಾರಾಯಣ ಉಡುಪರು ಮತ್ತು ರೊ. ಎನ್.ಜಿ. ಉಷಾರವರು ವೇದಿಕೆಯಲ್ಲಿದ್ದರು.




ಸನ್ಮಾನಕ್ಕೆ ಉತ್ತರಿಸಿದ ಡಾ. ಗುಡದಪ್ಪ ಕಸಬಿಯವರು ನನ್ನನ್ನು ಈ ಕ್ಲಬ್‌ನವರು ಕರೆಸಿ ಗೌರವಿಸಿದ್ದಕ್ಕೆ ತಾವು ಆಭಾರಿಯಾಗಿರುವುದಾಗಿ ತಿಳಿಸಿದರು. ಅಲ್ಲದೇ ಇದರಿಂದ ತಮಗೆ ಸಂತೋಷವಾಗಿರುವುದಾಗಿ ತಿಳಿಸಿ, ರೋಟರಿ ಯುವಕೇಂದ್ರದ ನೂತನ ಸಭಾಂಗಣದ ಬಗ್ಗೆ ತಮ್ಮ ಮೆಚ್ಚುಗೆ ವ್ಯಕ್ತ ಪಡಿಸಿದರು.

ಅಲ್ಲದೇ ಈಗ ರಾಜ್ಯದಲ್ಲಿ ಹರಡುತ್ತಿರುವ ಡೆಂಗ್ಯೂ ಕಾಯಿಲೆ ಬಗ್ಗೆ ಮಾಹಿತಿ ನೀಡಿದರು. ಈ ಕಾಯಿಲೆ ಈಗ ಜಾಸ್ತಿಯಾಗುತ್ತಿದೆ. ಬೇರೆ ಬೇರೆ ದೇಶಗಳಲ್ಲಿ ಹವಾಮಾನ ವೈಪರೀತ್ಯದಿಂದ, ಸೊಳ್ಳೆಗಳಿಂದ ಇದು ಹರಡುತ್ತಿದೆ. ಈ ಕಾಯಿಲೆ ಹರಡುವ ಜೀಕಾ ವೈರಸ್‌ನಿಂದ ತೊಂದರೆಯುಂಟಾಗುತ್ತಿದೆ. ಪ್ರಾಥಮಿಕವಾಗಿ ಇದು ಮನುಷ್ಯನಿಗೆ ಜ್ವರ, ಕೆಮ್ಮು, ಕಣ್ಣು ಕೆಂಪಾಗುವುದು, ಚರ್ಮದ ಗಡುಸಾಗುವಿಕೆಯಿಂದ ಉಂಟಾಗುತ್ತದೆ. ಒಟ್ಟು ಶಿವಮೊಗ್ಗದಲ್ಲಿ 381 ಕೇಸ್‌ಗಳು ಪತ್ತೆಯಾಗಿವೆ. 4–5 ಸಾವಿನ ಪ್ರಮಾಣವಿದೆ. ಯುವಜನರಿಗೆ ಮಕ್ಕಳಿಗೇ ಇದರಿಂದ ತೊಂದರೆಯಾಗುತ್ತಿದೆ. ಈ ಬಗ್ಗೆ ಬಹಳ ಗಂಭೀರವಾಗಿ ಕ್ರಮ ತೆಗೆದುಕೊಳ್ಳಬೇಕಾಗುತ್ತೆ. ಪ್ರತಿಯೊಂದಕ್ಕೂ ನಗರಸಭೆ ಮತ್ತು ಆಡಳಿತ ಮಂಡಳಿಯನ್ನು ದೂಷಿಸಲಾಗದು. ಇಲ್ಲಿ ನಮ್ಮ ತಪ್ಪುಗಳೂ ಸಹ ಇರುತ್ತದೆ ಎಂದರು. ಉದಾಹರಣೆಗೆ ಮನೆಯಲ್ಲೇ ಬೆಳೆಸಿರುವ ಹೂಕುಂಡಗಳು ಅದರಲ್ಲಿರುವ ನೀರಿನ ಅಂಶ. ಅವೆಲ್ಲವೂ ಇಲ್ಲದಿದ್ದಲ್ಲಿ ನಿಮ್ಮ ಫ್ರಿಜ್ ಒಳಗೆ ಗಮನಿಸಿ ಅಲ್ಲಿ ನಿಂತ ನೀರು ಇರುತ್ತೆ. ಅಲ್ಲಿಯೂ ಕೂಡ ಲಾರ್ವಾ ಬೆಳವಣಿಗೆಗೆ ಸಹಕಾರಿಯಾಗುವಂತಿರುತ್ತದೆ. ಖಾಲಿ ನಿವೇಶನಗಳು ಸ್ವಚ್ಛವಾಗಿರುವಂತೆ ನೋಡಿಕೊಳ್ಳಬೇಕು. ಹೀಗೆ ನಿಂತ ನೀರು ಇದಕ್ಕೆ ಮೂಲವಾಗಿದೆ. ಆದ್ದರಿಂದ ಅವುಗಳನ್ನೆಲ್ಲವನ್ನು ಗಮನಿಸಿ ನಿಮ್ಮ ಆರೋಗ್ಯ ಕಾಪಾಡಿಕೊಳ್ಳಿ ಎಂದು ತಿಳಿಸಿ, ತಮ್ಮನ್ನು ಗೌರವಿಸಿದ್ದಕ್ಕೆ ತಮ್ಮ ಕೃತಜ್ಞತೆ ವ್ಯಕ್ತಪಡಿಸಿದರು.

ನಮ್ಮ ಕ್ಲಬ್‌ನ ಡಾಕ್ಟರುಗಳಿಗೆ ಗೌರವಾರ್ಪಣೆ: ಮಾಜಿ ಅಧ್ಯಕ್ಷರಾದ ರೊ. ಎನ್.ವಿ.ಭಟ್‌ರವರು ಡಾ. ಬಿ.ಸಿ.ರಾಯ್‌ರವರ ಜನ್ಮದಿನದ ಪ್ರಯುಕ್ತ ವೈದ್ಯರುಗಳ ದಿನಾಚರಣೆಯಿದ್ದು ಆ ಪ್ರಯುಕ್ತ ಆಗಮಿಸಿದ್ದ ಕ್ಲಬ್‌ನ ಎಲ್ಲಾ ವೈದ್ಯರುಗಳನ್ನು ವೇದಿಕೆಗೆ ಆಹ್ವಾನಿಸಿದರು. ಮೊದಲನೆ ಹಂತವಾಗಿ ರೊ.ಡಾ.ಕಾಂಚನ ಕುಲಕರ್ಣಿ, ರೊ.ಡಾ. ರಕ್ಷಾ ಯು. ರಾವ್, ರೊ.ಡಾ. ಉಷಾ ಆರ್.ಪ್ರಭು, ಡಾ.ರಜನಿ ಪೈರವರನ್ನು ಅಭಿನಂದಿಸಿ ನೆನಪಿನ ಕಾಣಿಕೆ ನೀಡಲಾಯಿತು.

ಎರಡನೇ ಹಂತದಲ್ಲಿ ರೊ.ಪಿಡಿಜಿ. ಡಾ. ಆರ್.ಡಿ.ಪ್ರಭು, ರೊ. ಡಾ. ಹೆಚ್.ಪಿ.ಸಿ. ಶಿವಕುಮಾರ್, ರೊ.ಡಾ. ಪುನೀತ್ ಇಸ್ಲೂರ್, ಡಾ. ಗಿರೀಶ್ ಕುಮಾರ್ ಇವರುಗಳನ್ನು ರೊ. ಸುನೀತಾ ಶ್ರೀಧರ್, ರೊ.ಶಾರದಾ ಗೋಪಾಲ್, ರೊ.ಭಾರ್ಗವಿ ಭಟ್, ರೊ.ರಮಾ ಗೋಪಾಲ್, ರೊ. ಅನುರಾಧ ಶೀರನಾಳಿ, ಗಾಯತ್ರಿ ಸುಮತೀಂದ್ರ, ರೊ. ವೈ.ಗೋಪಾಲಕೃಷ್ಣ ಗುಪ್ತ, ರೊ. ಕಿಶೋರ್ ಶೀರನಾಳಿ, ರೊ.ಎಸ್.ಜಿ. ಗೋಪಾಲ್, ರೊ.ವೀರಣ್ಣ ಎ. ಹುಗ್ಗಿಯವರುಗಳು ಸೇರಿ ಅಭಿನಂದಿಸಿದರು.








ಮುಖ್ಯ ಅತಿಥಿಗಳಾದ ಡಾ.ಶೂನ್ಯ ಸಂಪದ್ ಮತ್ತು ಡಾ. ಪಲ್ಲವಿಯವರನ್ನು ರೊ.ಎಸ್.ಜಿ.ಗೋಪಾಲ್, ರೊ.ಎನ್.ಜಿ. ಉಷಾ, ರೊ. ಭಾರ್ಗವಿ ಭಟ್, ರೊ.ಎನ್.ವಿ.ಭಟ್ ಗೌರವಿಸಿದರು. ಅಧ್ಯಕ್ಷ ನುಡಿಯನ್ನಾಡಿದ ಅಧ್ಯಕ್ಷರಾದ ರೊ. ಸೂರ್ಯನಾರಾಯಣ ಉಡುಪರವರು, 'ವೈದ್ಯೋ ನಾರಾಯಣೋ ಹರಿಃ' ಎಂಬಂತೆ ವೈದ್ಯರುಗಳ ನಿಸ್ವಾರ್ಥ ಸೇವೆ ಅಭಿನಂದನೀಯ. ಆದ್ದರಿಂದ ಅವರುಗಳಿಗೆ ಸನ್ಮಾನ ಕಾರ್ಯ ಕೈಗೊಂಡಿದ್ದೇವೆ. ಅದಕ್ಕಾಗಿ ಸಹಕರಿಸಿದ ಎಲ್ಲರಿಗೂ ಕೃತಜ್ಞತೆ ಎಂದರು. ಕೊನೆಯಲ್ಲಿ ರೊ.ಗಾಯತ್ರಿ ಸುಮತೀಂದ್ರರವರು ಸರ್ವರನ್ನು ವಂದಿಸಿದರು. ರಾಷ್ಟ್ರಗೀತೆಯ ನಂತರ ಸಭೆ ಮುಕ್ತಾಯವಾಯಿತು.

## ಇಂಟರಾಕ್ಟ್ ಕ್ಲಬ್‌ಗಳ ಪದವಿ ಸ್ವೀಕಾರ ಸಮಾರಂಭ

### ವೀಣಾ ಶಾರದಾ ಪ್ರೌಢಶಾಲೆ








ದಿನಾಂಕ: 22.07.2024 ರಂದು ನಗರದ ಹೊಸಮನೆ ಬಡಾವಣೆಯಲ್ಲಿನ ವೀಣಾ ಶಾರದಾ ಪ್ರೌಢಶಾಲೆಯಲ್ಲಿ ಇಂಟರಾಕ್ಟ್ ಕ್ಲಬ್‌ನ ಪದಾಧಿಕಾರಿಗಳ ಪದವಿ ಸ್ವೀಕಾರ ಸಮಾರಂಭ ಏರ್ಪಡಿಸಲಾಗಿತ್ತು. ಅಧ್ಯಕ್ಷರಾದ ರೊ. ಕೆ. ಸೂರ್ಯನಾರಾಯಣ ಉಡುಪ, ಕಾರ್ಯದರ್ಶಿ ರೊ.ಎನ್.ಜಿ. ಉಷಾ, ಚೇರ್ಮನ್ ಗಾಯತ್ರಿ ಹಾಗೂ ರೊ. ಸುನೀತಾ ಶ್ರೀಧರ್, ರೊ. ಜಗದೀಶ್ ಕಾಮತ್, ರೊ. ಶ್ರೀನಿವಾಸ್, ರೊ. ಎನ್.ವಿ.ಭಟ್ ಹಾಗೂ ಶಾಲಾ ಮುಖ್ಯೋಪಾದ್ಯಾಯಿನಿ ಶ್ರೀಮತಿ ನವೀನ ಲಕ್ಷ್ಮೀ ಮತ್ತು ಶಿಕ್ಷಕರುಗಳು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಶಾಲಾ ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕಗಳನ್ನು ವಿತರಣೆ ಮಾಡಲಾಯಿತು. ರೊ.ಎನ್.ವಿ. ಭಟ್ ಮತ್ತು ರೊ.ಎನ್.ಎಸ್. ಶ್ರೀಧರ್‌ರವರು ಮಕ್ಕಳಿಗೆ ರಸ್ತೆ ಸುರಕ್ಷತೆ ಬಗ್ಗೆ ಮಾರ್ಗದರ್ಶನ ಮಾಡಿದರು.

### ಶ್ರೀ ಮಹಾವೀರ ವಿದ್ಯಾಲಯ ಪ್ರೌಢಶಾಲೆ




ದಿನಾಂಕ: 23.07.2024 ರಂದು ನಗರದ ಶ್ರೀ ಮಹಾವೀರ ವಿದ್ಯಾಲಯದ ಪ್ರೌಢಶಾಲೆಯಲ್ಲಿ ಇಂಟರಾಕ್ಟ್ ಪದಾಧಿಕಾರಿಗಳ ಪದವಿ ಸ್ವೀಕಾರ ಸಮಾರಂಭ ಏರ್ಪಡಿಸಲಾಗಿತ್ತು. ಅಧ್ಯಕ್ಷರಾದ ರೊ. ಕೆ. ಸೂರ್ಯನಾರಾಯಣ ಉಡುಪ, ಕಾರ್ಯದರ್ಶಿ ಎನ್.ಜಿ. ಉಷಾ, ರೊ. ಗಾಯತ್ರಿ ಸುಮತೀಂದ್ರ, ಶಾಲಾ ಮುಖ್ಯೋಪಾಧ್ಯಾಯರು, ಶಿಕ್ಷಕರು ಭಾಗವಹಿಸಿದ್ದರು.

## ಮುದ್ದುರಾಮನ ಪದಗಳು



ನೀ ಹೋದ ಬಳಿಕ ಈ ಲೋಕ ಮುಳುಗುವುದೇನು?
ರವಿ ಕಿರಣ ಮರೆಯಾಗಿ, ತಿರೆ ತಿರುಗದೇನು?
ನಿಲ್ಲದಾವುದು ಇಲ್ಲಿ ಯಾರಿರಲಿ ಇರದಿರಲಿ
ಮಿತಿ ಅರಿತರದು ಒಳಿತು – ಮುದ್ದುರಾಮ

## ಕಗ್ಗದ ಪರಿಮಳ ನಿಮಗಾಗಿ

**ಮನುಷ್ಯ ಯಾವುದರಿಂದ ತೃಪ್ತಿ ಪಡೆದಾನು ?**
ದನ ಸಿಂಗ ಹುಲಿಹಕ್ಕಿ ಹಾವು ಮೀನ್‌ಗಳಿಗೆಲ್ಲಾ
ಇನಿಸುಣಿಸು ಬೆದೆ ಬೆದರು – ಅಷ್ಟೇ ಜೀವಿತವು ।
ಮನುಜನೆಂತನಿತರಿಂ ತೃಪ್ತಿವಡೆವನವಂಗೆ
ಕ್ಷಣ ಕ್ಷಣವು ಹೊಸ ಹಸಿವು ಮಂಕುತಿಮ್ಮ॥

ಹಸು, ಸಿಂಹ, ಹುಲಿ, ಹಕ್ಕಿ, ಹಾವು, ಮೀನು, ಇವುಗಳಿಗೆಲ್ಲಾ ಒಂದಷ್ಟು ಊಟ, ವಂಶೋದ್ಧಾರದ ಪ್ರವೃತ್ತಿ, ಹಾಗೂ ಹೆದರಿಕೆ ಇವೇ ಜೀವನ. ಮನುಷ್ಯ ಇಷ್ಟರಲ್ಲೇ ತೃಪ್ತಿ ಪಡುತ್ತಾನೇನು? ಕ್ಷಣ ಕ್ಷಣಕ್ಕೂ ಹೊಸ ಹಸಿವು ಅವನನ್ನು ಕಾಡುತ್ತದೆ.

ಮನುಷ್ಯನ ಬದುಕಿಗೆ ಹೋಲಿಸಿದರೆ ಪಶು ಪಕ್ಷಿಗಳ ಬದುಕು ಒಂದು ಇತಿಮಿತಿಗಳಿಗೊಳಪಟ್ಟಿರುತ್ತದೆ. ಹಸು, ಸಿಂಹ, ಹುಲಿ, ಹಕ್ಕಿ ,ಹಾವು, ಮೀನು ಮುಂತಾದುವುಗಳಿಗೆ ಒಂದಿಷ್ಟು ಆಹಾರ, ವಂಶೋದ್ಧಾರ, ಕಾಮ ಒಂದಷ್ಟು ಹೆದರಿಕೆ. ಇವುಗಳಿಂದಲೇ ಅವುಗಳ ಬದುಕು ಪೂರ್ಣವಾಗಿ ಬಿಡುತ್ತದೆ.ಇಷ್ಟನ್ನು ಮೀರಿ ಅವೆಂದೂ ಹೋಗುವುದಿಲ್ಲ. ಆದರೆ ಮನುಷ್ಯ ಹಾಗಲ್ಲ. ಇಷ್ಟರಿಂದಲೇ ತೃಪ್ತಿ ಪಡುವುದಿಲ್ಲ. ತನ್ನ ಹೊಟ್ಟೆ ತುಂಬಿದ್ದರೂ. ಅದನ್ನು ಸಂಗ್ರಹಿಸಿಡಲು ಪ್ರಯತ್ನ ಮಾಡುತ್ತಾನೆ.ಅವನ ಕಾಮನೆಗಳು ಕೇವಲ ವಂಶೋದ್ಧಾರಕ್ಕೆ ಸೀಮಿತವಾಗಿರುವುದಿಲ್ಲ. ಅವನಿಗೆ ಕ್ಷಣ ಕ್ಷಣಕ್ಕೂ ಹೊಸ ಹಸಿವೆಗಳು ಹುಟ್ಟುತ್ತವೆ. ಅವನದು ಒಂದು ರೀತಿಯ ವಿಚಿತ್ರ ಹಸಿವೆ. ಹೊಟ್ಟೆ ತುಂಬಿದ್ದರೂ, ಸಿರಿ ತುಂಬಿದ್ದರೂ ಸಕಲ ಸೌಕರ್ಯಗಳಿದ್ದರೂ ಅವನ ಹಸಿವೆ ಇಂಗುವುದೇ ಇಲ್ಲ. ಇದರಿಂದಲೇ ಬದುಕಿನುದ್ದಕ್ಕೂ ಅವನಿಗೆ ಹತಾಶೆ. ನಿರಾಸೆಗಳು ಕಾಡುತ್ತಲೇ ಇರುತ್ತವೆ.

*(ಸಂಗ್ರಹ : ಜಿ. ಸತ್ಯನಾರಾಯಣ)*

## ವಿಶೇಷ ಪ್ರಕಟಣೆ

**ದಯಮಾಡಿ ಸದಸ್ಯರು 2024–25 ನೇ ಸಾಲಿನ ತಮ್ಮ ಸದಸ್ಯತ್ವ ಶುಲ್ಕವನ್ನು ಪಾವತಿ ಮಾಡಬೇಕಾಗಿ ವಿನಂತಿ.**

**–ರೊ. ಕೆ. ಸೂರ್ಯನಾರಾಯಣ ಉಡುಪ**
**ಅಧ್ಯಕ್ಷರು – 2024–25**

## ಗಮನಿಸಿ :

ದಿನಾಂಕ: 31–07–2024 ಬುಧವಾರ, ರೋಟರಿ ಸಭಾ ಭವನದಲ್ಲಿ ಪ್ರಥಮ ರೋಟರಿ ಕೌಟುಂಬಿಕ ಸ್ನೇಹಮಿಲನ ಕಾರ್ಯಕ್ರಮವನ್ನು ರೋಟರಿ ಸದಸ್ಯರ ಹಾಗೂ ಅವರ ಕುಟುಂಬದವರ ಪ್ರತಿಭೆಯನ್ನು ಅನಾವರಣ ಗೊಳಿಸುವುದರ ಮೂಲಕ ಗೌರವಿಸಲು ಮೀಸಲಿಡಲಾಗಿದೆ. ಎಲ್ಲಾ ಸದಸ್ಯರು ಈ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಲು ಕೋರಲಾಗಿದೆ.

1) ಪರಿಸರ ಗೀತೆ ಕನ್ನಡದಲ್ಲಿ ಒಬ್ಬರಿಗೆ 5 ನಿಮಿಷ ಒಟ್ಟು 6 ಸದಸ್ಯರಿಗೆ ಮಾತ್ರ ಅವಕಾಶ
2) ಪರಿಸರ ಕಾಳಜಿ – ರೋಟರಿ ಸದಸ್ಯರು ವೈಯಕ್ತಿಕವಾಗಿ ಕೈಗೊಂಡ ಕ್ರಮಗಳ ಬಗ್ಗೆ ಸಭೆಗೆ ಮಾಹಿತಿ. ಪ್ರತಿಯೊಬ್ಬ ಸದಸ್ಯರಿಗೆ 3 ನಿಮಿಷದಂತೆ 5 ಸದಸ್ಯರಿಗೆ ಅವಕಾಶ.

ತಮ್ಮ ಹೆಸರುಗಳನ್ನು ನೋಂದಾಯಿಸಿ : ರೊ. ಎನ್.ಜಿ. ಉಷಾ, ಕಾರ್ಯದರ್ಶಿ, 81975 92278, ರೊ. ಎನ್.ವಿ. ಭಟ್, ಛೇರ್ಮನ್ ಪ್ರೋಗ್ರಾಂ ಕಮಿಟಿ – 94481 71923.

ಮೊದಲು ಹೆಸರು ನೋಂದಾಯಿಸಿದವರಿಗೆ ಆದ್ಯತೆ ನೀಡಲಾಗುವುದು.



## ಸಂಪಾದಕೀಯ

## ನೆರೆಹೊರೆ

ಮೊನ್ನೆ ರಾತ್ರಿ ವಾಯುವಿಹಾರಕ್ಕೆಂದು ಹೋಗುತ್ತಿದ್ದಾಗ ದಾರಿಯಲ್ಲಿ ನನ್ನ ಸ್ನೇಹಿತರೊಬ್ಬರು ಸಿಕ್ಕಿ, ಇದೇನು ಇಷ್ಟು ಹೊತ್ತಿನಲ್ಲಿ ಈ ಕಡೆಯಲ್ಲಿ ಎಂದಾಗ, ಏನೂ ಇಲ್ಲ ಸಾರ್, ಇಲ್ಲೇ ಪಕ್ಕದ ರಸ್ತೆಯಲ್ಲಿರುವ ನಮ್ಮ ಸ್ನೇಹಿತರೊಬ್ಬರು ಊರಿಗೆ ಹೋಗಿದ್ದಾರೆ. ಅದಕ್ಕಾಗಿ ಅವರ ಮನೆಯಲ್ಲಿ ರಾತ್ರಿ ಹೊತ್ತು ಮಲಗಲು ಹೇಳಿದ್ದಾರೆ. ಅದಕ್ಕಾಗಿ ಹೋಗುತ್ತಿದ್ದೇನೆ. ಕಾಲ ಸರಿಯಿಲ್ಲ ನೋಡಿ ಎಂದರು. ಅದಕ್ಕೆ ನಾನು ಹೌದು ಸಾರ್ ಎಂದು ಹೂಂಗುಟ್ಟಿ ನನ್ನ ವಾಯುವಿಹಾರ ಮುಂದುವರಿಸಿ ಹಾಗೇ ಯೋಚಿಸುತ್ತಿದ್ದಾಗ, ಅರೇ ಹೌದಲ್ಲಾ ಈ ಪದ್ಧತಿ ಈಗ ಅಪರೂಪವಾಗಿದೆಯಲ್ಲ ಎಂದೆನಿಸಿತು.

ನಾವೆಲ್ಲಾ ಚಿಕ್ಕವರಿದ್ದಾಗ ನಮ್ಮ ನೆರೆಹೊರೆಯವರು ಅಥವಾ ಸಮೀಪದಲ್ಲೇ ಇರುವ ಬಂಧು-ಮಿತ್ರರು ಅಥವಾ ನಮ್ಮ ಮನೆಯವರೆಲ್ಲಾ ಮೂರ್ನಾಲ್ಕು ದಿನಗಳಿಗೂ ಹೆಚ್ಚಿಗೆ ಮನೆಯಿಂದ ಹೊರಗೆ ಹೋಗಬೇಕಾದರೆ, ನಮ್ಮ ಅಕ್ಕಪಕ್ಕದವರಿಗೆ ಹಗಲಿನಲ್ಲಿ ಮನೆಯತ್ತ ಗಮನವಿಡಲು ತಿಳಿಸಿ, ರಾತ್ರಿಯ ಹೊತ್ತಿನಲ್ಲಿ ಅವರ ಮನೆಯಲ್ಲಿರುವ ಯಾರಾದರೂ ವಯಸ್ಕರು ಆ ಮನೆಗಳಲ್ಲಿ ಮಲಗುವ ಸಂಪ್ರದಾಯವಿರುತ್ತಿತ್ತು. ನಾನೂ ಕೂಡ ಹೈಸ್ಕೂಲ್ ಅಥವಾ ಕಾಲೇಜಿನಲ್ಲಿ ಓದುತ್ತಿದ್ದ ಕಾಲದಲ್ಲಿ ಹಲವಾರು ಬಾರಿ ಈ ಜವಾಬ್ದಾರಿಯನ್ನು ನಿಭಾಯಿಸಿದ್ದೇನೆ.

ಅದೇ ರೀತಿ ಯಾರಾದರು ಬಂಧು-ಮಿತ್ರರು ಅಚಾನಕ್ಕಾಗಿ (ಈಗಿನ ಹಾಗೆ ಮೊದಲೇ ಕರೆ ಮಾಡಿ ಅಪ್ಪಣೆ ಕೋರಿ ಮನೆಗೆ ಬರುವ ಸಂಪ್ರದಾಯ ಆಗಿರಲಿಲ್ಲ) ಮಧ್ಯಾಹ್ನ ಊಟದ ಸಮಯದಲ್ಲಿ ಹಸಿವಿನಿಂದ ಮನೆಗೆ ಬಂದರೆ ನಮ್ಮ ಮನೆಯಲ್ಲಿ ಅವರಿಗೆ ಸಾಕಾಗುವಷ್ಟು ಆಹಾರ ಇಲ್ಲದಿದ್ದಲ್ಲಿ ಮತ್ತು ಹೊಸದಾಗಿ ಆಹಾರ ತಯಾರು ಮಾಡಲು ಸಮಯ ಹಿಡಿಯುತ್ತಿದ್ದ ಕಾರಣ ನಮ್ಮ ಅಕ್ಕಪಕ್ಕದವರ ಮನೆಗೆ ಹೋಗಿ ಅವರ ಮನೆಯಿಂದ ಯಾವುದೇ ರೀತಿಯ ಮುಜುಗರವಿಲ್ಲದೆ ಆಹಾರ ತೆಗೆದುಕೊಂಡು ಬಂದು, ಬಂದ ನೆಂಟರಿಷ್ಟರನ್ನು ಸತ್ಕರಿಸುವ ಪದ್ಧತಿ ಜಾರಿಯಲ್ಲಿತ್ತು. ಅದೇ ರೀತಿ ಅವರ ಮನೆಗೂ ನಮ್ಮ ಮನೆಯ ಆಹಾರಗಳು ಹೋಗುತ್ತಿದ್ದವು.

ಇನ್ನು ಕೆಲವು ಸಮಯ ಮನೆಗೆ ರಾತ್ರಿ ಹೊತ್ತಿನಲ್ಲಿ ಎಂಟು ಹತ್ತು ಜನ ಸಂಬಂಧಿಕರು ಬಂದರೆ ಅವರಿಗೆ ನಮ್ಮ ಮನೆಯಲ್ಲಿ ಮಲಗಲು ಅಗತ್ಯವಿದ್ದಷ್ಟು ಜಾಗವಿರದಿದ್ದಲ್ಲಿ, ಅವರ ಊಟೋಪಚಾರಗಳು ಎಲ್ಲವೂ ಮುಗಿದ ಮೇಲೆ ಕೆಲವರಿಗೆ ಅಕ್ಕಪಕ್ಕದ ಮನೆಗಳಲ್ಲಿ ಮಲಗುವ ವ್ಯವಸ್ಥೆ ಮಾಡಲಾಗುತ್ತಿತ್ತು. ಹಾಗೆ ಮಲಗಿದ್ದ ಮನೆಯವರು ನಮ್ಮ ಮನೆಯ ಬಂಧುಗಳನ್ನು ಅವರ ಮನೆಯ ಬಂಧುಗಳೆಂದೇ ಭಾವಿಸಿ ಅವರಿಗೆ ತಕ್ಕ ಅನುಕೂಲಗಳನ್ನೆಲ್ಲಾ ಮಾಡಿಕೊಟ್ಟು ಬೆಳಗ್ಗೆ ಅವರ ಮನೆಯಲ್ಲಿಯೇ ಸ್ನಾನಾನಂತರ ಕಾಫೀ ತಿಂಡಿಯನ್ನೂ ಮಾಡಿಕೊಟ್ಟಿದ್ದು ಉಂಟು.

ಇಂದು ಆಧುನಿಕ ಜಗತ್ತಿಗೆ ನಮ್ಮನ್ನು ತೊಡಗಿಸಿಕೊಳ್ಳುತ್ತಿದ್ದಂತೆಯೇ ಅವಿಭಕ್ತ ಕುಟುಂಬಗಳೆಲ್ಲಾ ವಿಭಕ್ತ ಕುಟುಂಬಗಳಾಗಿ, ಬಹುತೇಕ ಮೇಲೆ ತಿಳಿಸಿದಂತಹ ಎಲ್ಲಾ ಸಂಸ್ಕೃತಿಗಳೂ ಮಾಯವಾಗಿ ಹೋಗುತ್ತಿರುವುದು ವಿಪರ್ಯಾಸವೇ ಸರಿ. ಮೊದಲೆಲ್ಲಾ ನಮ್ಮ ಊರಿನಲ್ಲಿ ಯಾರಾದರೂ ಮನೆಯಲ್ಲಿ ಸತ್ಯನಾರಾಯಣ ಪೂಜೆ, ನಾಮಕರಣ, ಇಲ್ಲವೆ ಮತ್ತಾವುದೇ ಸಣ್ಣ ಪುಟ್ಟ ಸಮಾರಂಭಗಳು ಇದ್ದಲ್ಲಿ ಅಕ್ಕಪಕ್ಕದವರೆಲ್ಲಾ ಒಂದಾಗಿಯೇ ಕೂಡಿ ಆಚರಿಸುತ್ತಿದ್ದರು. ಎಲ್ಲ ಮನೆಯ ಹೆಂಗಳೆಯರು ತರಕಾರಿ ಹೆಚ್ಚಿ, ಮನೆಯ ಮುಂದೆ ರಂಗೋಲಿ ಹಾಕುವುದು, ಹೂ ಕಟ್ಟುವುದು, ದೇವರನ್ನು ಅಣಿ ಮಾಡುತ್ತಿದ್ದರೆ, ಗಂಡಸರೆಲ್ಲಾ ಚಪ್ಪರ, ತಳಿರು ತೋರಣಗಳ ವ್ಯವಸ್ಥೆಯ ಜೊತೆಗೆ ತಾವೇ ಅಡುಗೆಯನ್ನೂ ಮಾಡಿದರೆ, ಚಿಕ್ಕ ಮಕ್ಕಳು ಚಾಪೆ, ಊಟದ ಎಲೆಗಳನ್ನು ಹಾಕುವುದು, ನೀರು, ಉಪ್ಪು ಬಡಿಸುವ ವ್ಯವಸ್ಥೆಗಳಲ್ಲಿ ತೊಡಗಿಕೊಳ್ಳುತ್ತಿದ್ದರು. ಹೀಗೆ ಒಬ್ಬರ ಮನೆಯ ಸಭೆ ಸಮಾರಂಭಗಳು ಇಡೀ ನೆರೆಹೊರೆಯವರಿಗೆಲ್ಲಾ ಒಟ್ಟಿಗೆ ಬೆರೆತು ಸಂಭ್ರಮಿಸುವ ಸುಮಧುರ ವಾತಾವರಣವಿರುತ್ತಿತ್ತು.

ಇಂದು ಆಧುನಿಕ ಜಗತ್ತಿಗೆ ನಮ್ಮನ್ನು ತೊಡಗಿಸಿಕೊಳ್ಳುತ್ತಿದ್ದಂತೆಯೇ ಅವಿಭಕ್ತ ಕುಟುಂಬಗಳೆಲ್ಲಾ ವಿಭಕ್ತ ಕುಟುಂಬಗಳಾಗಿ, ಬಹುತೇಕ ಮೇಲೆ ತಿಳಿಸಿದಂತಹ ಎಲ್ಲಾ ಸಂಸ್ಕೃತಿಗಳೂ ಮಾಯವಾಗಿ ಹೋಗುತ್ತಿರುವುದು ವಿಪರ್ಯಾಸವೇ ಸರಿ. ನೆರೆಹೊರೆಯುವರನ್ನು ಬಿಡಿ, ಮುಂಚೆ ಸಮಾರಂಭಗಳಿಗೆ ಎರಡು ದಿನಗಳ ಮುಂಚೆಯೇ ಕುಟುಂಬ ಸಮೇತರಾಗಿ ಆಗಮಿಸಿ, ಬರುವಾಗ ತಮ್ಮ ಕೈಯಲ್ಲಾದ ವಸ್ತುಗಳ ಸಮೇತ ಬಂದು ಎಲ್ಲಾ ಕೆಲಸ ಕಾರ್ಯಗಳಲ್ಲಿಯೂ ಕೈ ಜೋಡಿಸಿ ಸಮಾರಂಭ ಮುಗಿದು ಎರಡು ದಿನಗಳಾದ ನಂತರವೇ ಹೋಗುತ್ತಿದ್ದ ಬಂಧುಗಳು ಇಂದು ಸಮಾರಂಭದ ದಿನವೇ ಒಬ್ಬರೂ ಇಲ್ಲವೇ ಇಬ್ಬರು ಆಗಮಿಸಿ ಊಟ ಮುಗಿದು ಕೈತೊಳೆಯುತ್ತಿದ್ದಂತೆಯೇ ನಿರ್ಗಮಿಸುವ ಎನ್ನುವ ಪರಿಸ್ಥಿತಿ ಬಂದೊದಗಿದೆ.

ಅಂದು ಎಲ್ಲರ ಮನೆಗಳು ದೂರ ದೂರ ಇದ್ದರೂ ಸಂಬಂಧಗಳು ಮಾತ್ರ ಹತ್ತಿರವೇ ಇರುತ್ತಿದ್ದವು. ಇಂದು ಅದೇ ಮನೆಗಳ ಜಾಗದಲ್ಲಿ ಬಹು ಅಂತಸ್ತಿನ ಕಟ್ಟಡಗಳು ತಲೆಯೆತ್ತಿ ಹತ್ತಾರು ಮನೆಗಳು ಅಕ್ಕಪಕ್ಕದಲ್ಲೇ ಜೋಡಿಸಿಕೊಂಡೇ ಇದ್ದರೂ ನೆರೆಹೊರೆಯವರ ಪರಿಚಯವೇ ಹೆಚ್ಚಿನವರಿಗೆ ಇಲ್ಲದಿರುವುದು ಶೋಚನೀಯವಾಗಿದೆ.

ಇನ್ನೂ ಕಾಲ ಮಿಂಚಿ ಹೋಗುವ ಮೊದಲು ನಮ್ಮ ನೆರೆಹೊರೆಯ ಮತ್ತು ಬಂಧು-ಬಾಂದವರ ಸಂಬಂಧಗಳನ್ನು ವೃದ್ಧಿಸಿಕೊಳ್ಳುವ ಜೊತೆಗೆ ಬಾಂಧವ್ಯಗಳನ್ನು ಗಟ್ಟಿ ಮಾಡಿಕೊಳ್ಳೋಣ ಮತ್ತು ನೆಮ್ಮದಿಯ ಸಹಬಾಳ್ವೆ ನಡೆಸೋಣ. ಮುಂದಿನ ತಲೆಮಾರಿನವರಿಗೂ ಒಳ್ಳೆಯ ಸಂಸ್ಕಾರ ಮತ್ತು ಸಂಪ್ರದಾಯಗಳನ್ನು ಉಳಿಸಿ ಹೋಗೋಣ.

**ರೋಟರಿ ಮಾಹಿತಿ : ರೊ. ವೈ. ಗೋಪಾಲಕೃಷ್ಣ ಗುಪ್ತ**

### RI Convention in Singapore

2023-24 R.I. President Gordon Melnaky. Rotary International Convention was held at Singapore on May 2024. Nearly 14000 delegates gathered for the convention all over the world.

At the opening session there was flag march with Rotaractors wearing the floags of over 200 member countries.

The R.I. President said over 100 humanitarian service projects done by Rotarians all over the world and they shared the views.

ರೋಟರಿ ಸಮಾವೇಶಗಳು ಅರ್ಥ ಪೂರ್ಣ ಸಂಪರ್ಕಗಳನ್ನು ರಚಿಸಲು ಜನರನ್ನೂ ಒಟ್ಟಿಗೆ ತರುವುದು ಮತ್ತು ಹೆಚ್ಚು ಆರೋಗ್ಯಕರ ಭರವಸೆಯ ಭರವಸೆಯ ಶಾಂತಿಯುತ ಜಗತ್ತನ್ನು ರಚಿಸಲು ಸಹಾಯ ಮಾಡಲು ಪರಸ್ಪರ ಪ್ರೇರೇಪಿಸುವುದು ಎಂದು ಮೆಕನಿಲೆ ಹೇಳಿದರು.

### Happy Birthday Wishes








*Sathish Kumar C*
*28th July*

### Wedding Anniversary Wishes

| | |
|---|---|
| *Kishore Sheernaly & Smt. Anuradha* | *6th July* |
| *H.D.Udayashankar Sastry & Smt. Vasanth* | *14th July* |
| *Raghunandan B.G. & Sumalatha Bhoopalam* | *14th July* |
| *Vijayakumar C. & Smt. Gowry V.* | *14th July* |
| *Dr. Priyamvada & Dr. Aravind* | *26th July* |

To, *Book Post*

ಮುದ್ರಣ: ರಾಯಲ್ ಪ್ರಿಂಟರ್ಸ್, ಶಿವಮೊಗ್ಗ, 98862 73495